ಸಹ ಕಲಾವಿದರ ಬಗ್ಗೆ ಪುನೀತ್ ಅವರಿಗೆ ಅಪಾರ ಕಾಳಜಿ. ಅವರೊಂದಿಗೆ ಕಳೆದ ಕ್ಷಣಗಳು ಕಡಿಮೆಯಾದರೂ, ಅವೆಲ್ಲವೂ ಎಂದೂ ಮರೆಯಲಾಗದ ಅಮೃತ ಕ್ಷಣಗಳು.

# ಅಪ್ಪು... ಸೆಲ್ಯೂಟ್...



ಪುನೀತ್ ಜೊತೆ ವೀಣಾ ಮತ್ತು ಸುಂದರ್

■ **ಸುಂದರ್ ವೀಣಾ, ನಟ**

ಮನಸ್ಸು ಖಾಲಿ ಅನ್ನಿಸ್ತಿದೆ. ಭಾರವಾಗಿದೆ. 'ನಂಬಲು ಸಾಧ್ಯವಾಗುತ್ತಿಲ್ಲ' ಎನ್ನುವ ಕ್ಲೀಷೆಯ ಮಾತುಗಳ ಹಿಂದಿನ ಭಾವವನ್ನು ಅದೆಷ್ಟೋ ಪಟ್ಟು ಹೆಚ್ಚು ಅನುಭವಿಸಿದ್ದು ಮಾತ್ರ ಇದೇ ಮೊದಲು.

ನನಗೆ ಪುನೀತ್ ತುಂಬಾ ಪರಿಚಯದವರೇನಲ್ಲ. ಅವರೊಂದಿಗೆ ಒಡನಾಡಿದ ದಿನಗಳು ಬಹಳಷ್ಟೇನಿಲ್ಲ. ಆದರೂ ಆತನೊಂದಿಗೆ ಕಳೆದ ಗಳಿಗೆಗಳು ಈ ಕ್ಷಣ ಅದೆಷ್ಟು ಮಹತ್ವದ್ದು ಎನಿಸಲು ಅವರು ಇನ್ನಿಲ್ಲ ಎನ್ನುವುದೊಂದೇ ಕಾರಣವಾಗಿಲ್ಲ. ಪುನೀತ್‌ರನ್ನು ಕಳೆದುಕೊಂಡಿದ್ದು ಇಷ್ಟರಮಟ್ಟಿಗೆ ಶೂನ್ಯ ಆವರಿಸಲು ಕಾರಣ ಅವರು ಒಬ್ಬ ವ್ಯಕ್ತಿ ಅಷ್ಟೇ ಆಗಿರದೆ, ಒಂದು ಸಂಸ್ಥೆ ಆಗಿದ್ದಿದ್ದು, ಒಂದು ಶಕ್ತಿಯಾಗಿದ್ದಿದ್ದು, ಒಬ್ಬ ಹೃದಯವಂತ ಮನುಷ್ಯ ಆಗಿದ್ದಿದ್ದು.

ಅವರು ಹುಟ್ಟುಹಾಕಿದ 'ನಿರ್ಮಾಣ ಸಂಸ್ಥೆ' (ಪಿಆರ್‌ಕೆ ಪ್ರೊಡಕ್ಷನ್ಸ್) ಅನೇಕ ಪ್ರಯೋಗಾತ್ಮಕ, ಹೊಸ ಪ್ರತಿಭೆಗಳ, ಕಂಟೆಂಟ್ ಪ್ರಧಾನ ಚಿತ್ರಗಳ ಕನಸು ಹುಟ್ಟುಹಾಕಿತ್ತು. ಒಂದು ಹೊಸ ತಲೆಮಾರನ್ನು ಚಿತ್ರರಂಗಕ್ಕೆ ಬರಮಾಡಿಕೊಳ್ಳುವ 'ಪ್ರವೇಶ ಸಂಸ್ಥೆ'ಯನ್ನು ರೂಪಿಸಿದ್ದು ಅವರ ಸಿನಿಮಾಪ್ರೀತಿಗೆ ಉದಾಹರಣೆ ಹಾಗೂ ದೊಡ್ಡತನ. ಒಂದು ಹೊಸ ತಲೆಮಾರನ್ನು ಪೋಷಿಸುವ, ಪ್ರೋತ್ಸಾಹಿಸುವ 'ಪ್ರವೇಶ ಸಂಸ್ಥೆ' ಮುಂದೆ ಏನಾದೀತು ಎನ್ನುವುದು ಆತಂಕದ ಸಂಗತಿ.

ನಾನು ಆಗಲೇ ಹೇಳಿದ ಹಾಗೆ ಅವರೊಂದಿಗೆ ಹೆಚ್ಚು ಒಡನಾಡಿಲ್ಲ. ದಶಕಗಳ ಹಿಂದೆ ಅವರ ಸಂಸ್ಥೆ ಈ ಟೀವಿ ವಾಹಿನಿಗಾಗಿ ಒಂದು ಧಾರಾವಾಹಿಯನ್ನು ನಿರ್ಮಿಸಿತ್ತು. ಅದರ ನಿರ್ದೇಶಕರು ಎ.ಜೆ. ಶೇಷಾದ್ರಿ. ಅವರು ಆ ಧಾರಾವಾಹಿಯ ಮುಖ್ಯಪಾತ್ರಕ್ಕೆ ನನ್ನನ್ನು ಗೊತ್ತುಮಾಡಿ ವಜ್ರೇಶ್ವರಿಯ ಆಫೀಸ್‌ಗೆ ಬರಮಾಡಿದರು. ಆಗ ನಾನು ರಾಘಣ್ಣನವರನ್ನು ಭೇಟಿಯಾಗಿದ್ದೆ. ಪುನೀತ್‌ರವರು ಆ ಧಾರಾವಾಹಿಯ ಮತ್ತೊಬ್ಬ ನಿರ್ಮಾಪಕರಾದರೂ ಅವರನ್ನು ಭೇಟಿಯಾಗಿರಲಿಲ್ಲ. ಆಗಿನ್ನೂ ಅವರ ಮೊದಲ ಚಿತ್ರ ಕೂಡ ಬಿಡುಗಡೆಯಾಗಿರಲಿಲ್ಲ. ಆದರೆ ಅದರ ತಯಾರಿ ಹಾಗೂ ಶೂಟಿಂಗ್ ನಡೆಯುತ್ತಿತ್ತು. ಆ ಧಾರಾವಾಹಿಯ ಮುಹೂರ್ತದ ದಿನವಷ್ಟೇ ಅವರನ್ನು ಭೇಟಿಯಾದದ್ದು. ಅಂದೇ ರಾಜ್‌ಕುಮಾರ್ ಅವರೊಂದಿಗೆ ಮುಖತಃ ಮಾತನಾಡಿದ್ದು. ಪುನೀತ್ ಅವರಿಗೆ ನನ್ನನ್ನು ಪರಿಚಯ ಮಾಡಿಕೊಟ್ಟಾಗ ಆತ್ಮೀಯತೆಯಿಂದ ಕೈಚಾಚಿ 'ಆಲ್ ದ ಬೆಸ್ಟ್' ಹೇಳಿದ್ದರು. ವರ್ಷಕಾಲ ಆ ಧಾರಾವಾಹಿಯ ಚಿತ್ರೀಕರಣದಲ್ಲಿ ಪಾಲ್ಗೊಂಡರೂ ಮತ್ತೆ ಅವರನ್ನು ಭೇಟಿಯಾಗಲಿಲ್ಲ. ಆದರೆ ಅದೇ ಹೊತ್ತಿಗೆ ಅವರ ಮೊದಲ ಚಲನಚಿತ್ರ 'ಅಪ್ಪು' ನೂರುದಿನಗಳನ್ನು ಕಂಡಾಗ ಅದರ ಸಂಭ್ರಮದ ಔತಣ ಮಾತ್ರ ನಮ್ಮ ಚಿತ್ರೀಕರಣದ ಸೆಟ್‌ಗೆ ಬಂದಿತ್ತು.

ಮತ್ತೆ ನಾನು ಪುನೀತ್ ಅವರನ್ನ ಭೇಟಿ ಮಾಡಿದ್ದು ಅದಾದ ಹತ್ತು ವರ್ಷಗಳ ನಂತರ. 'ರಾಜಕುಮಾರ' ಚಿತ್ರದ ಸಂದರ್ಭದಲ್ಲಿ. ನಾನು ನನ್ನ ಪರಿಚಯ ಹೇಳಿಕೊಂಡು 'ನಿಮ್ಮ ಧಾರಾವಾಹಿಯಲ್ಲಿ ನಾಯಕನಾಗಿದ್ದೆ' ಅಂದಾಗ 'ನೆನಪಿದೆ' ಎಂದರು. ಆದರೆ ನನಗೆ ಅನುಮಾನವಿತ್ತು. ಆನಂತರದ ಮಾತಿನಲ್ಲಿ ನನ್ನ ಅನುಮಾನವನ್ನು ಸುಳ್ಳು ಮಾಡಿಸಿದರು. ಪುನೀತ್ ಅವರಿಗೆ ನನ್ನನ್ನು ಮರೆಯದಿರಲು ಮತ್ತೊಂದು ಕಾರಣ ಅವರ ಆತ್ಮೀಯ ಸ್ನೇಹಿತ ಮುರಳಿ ಎನ್ನುವವರು ನೋಡಲು ನನ್ನಂತೆಯೇ ಇದ್ದಾರಂತೆ. ಟೀವಿಯಲ್ಲಿ ನನ್ನ ಮುಖ ಕಂಡಾಗಲೆಲ್ಲ ಅವರ ಪತ್ನಿ 'ನೋಡಿ ನಿಮ್ಮ ಫ್ರೆಂಡ್ ಬರ್ತಿದ್ದಾರೆ' ಎಂದು ನನ್ನನ್ನು ತೋರಿಸುತ್ತಿದ್ದರಂತೆ. ಇದನ್ನು ತೀರಾ ಮಗುವಿನಂತೆ ಉತ್ಸಾಹದಿಂದ ಹೇಳುತ್ತಿದ್ದಾಗ ನಾನು ಅವರನ್ನೇ ನೋಡುತ್ತಿದ್ದೆ. ಈ ಮನುಷ್ಯ ಇಷ್ಟು ದೊಡ್ಡ ಸ್ಟಾರ್ ಆದರೂ ಹೀಗೆ ಮಾತನಾಡುತ್ತಾರಲ್ಲಾ ಎಂದು ಅಚ್ಚರಿಪಟ್ಟಿದ್ದೆ.

'ರಾಜಕುಮಾರ' ಚಿತ್ರದ ಯಶಸ್ಸಿನ ಸಮಾರಂಭಗಳಲ್ಲೇ ಮತ್ತೆ ನಾನು ಅವರನ್ನ ಕಂಡಿದ್ದು. ಅಷ್ಟೊಂದು ಜನಜಂಗುಳಿಯ ನಡುವೆಯೂ ನನಗೆ ಒಂದು 'ಹಲೋ' ಹೇಳಿದ್ದರು ಅಷ್ಟೆ. ಅದರ ಪಾರ್ಟಿಗೂ ನಾನು ಹೋಗಲಾಗಲಿಲ್ಲ. ಅವರ ಅಭಿಮಾನಿಯಾದ ನನ್ನ ಮಗ ಕಾರ್ಯಕ್ರಮಕ್ಕೆ ಹೋಗಿದ್ದ. ನನ್ನ ಪತ್ನಿ ವೀಣಾಳನ್ನು ನೋಡಿ 'ಸುಂದರ್ ಎಲ್ಲಿ' ಎಂದು ಪುನೀತ್ ಕೇಳಿದ್ದರಂತೆ!. ನನ್ನ ಮಗನ ಬೆನ್ನುತಟ್ಟಿ 'ನನ್ನ ಮಗಳೂ ಹೀಗೇ ಇದ್ದಾಳೆ' ಎಂದರಂತೆ.

ಅವರೊಂದಿಗೆ ಮತ್ತೆ ಹೆಚ್ಚು ಮಾತನಾಡಿದ್ದು 'ಯುವರತ್ನ' ಚಿತ್ರದ ಚಿತ್ರೀಕರಣದಲ್ಲಿ. ಅಲ್ಲಿ ನಮ್ಮ ಕಲಾವಿದರ ದಂಡೇ ಇದ್ದರೂ ಎಲ್ಲರೊಂದಿಗೂ ಬೆರೆತು, ಎಲ್ಲರಲ್ಲೂ ಸಮಾನ ಆತ್ಮೀಯತೆಯಿಂದ ಮಾತನಾಡಿದ್ದರು ಪುನೀತ್. ನಾನು ಅವರಿಗೆ 'ಹಲೋ' ಎಂದು ಹೇಳಿ 'ನಾನು ಮುರಳಿ ಅಲ್ಲ' ಎಂದು ನಕ್ಕಿದ್ದೆ. ಪುನೀತ್ ಹೆಗಲ ಮೇಲೆ ಕೈಹಾಕಿ 'ಗೊತ್ತು, ಆದರೆ ನಿಮ್ಮನ್ನ ಕಂಡಾಗಲೆಲ್ಲ ನನಗೆ ಅವನದೇ ನೆನಪು. ಮುರಳಿಯನ್ನು ಕಂಡಾಗಲೆಲ್ಲ ನಿಮ್ಮನ್ನು ನೆನಪಿಸಿಕೊಳ್ಳುವೆ' ಎಂದಿದ್ದರು.

ಆ ದೃಶ್ಯದಲ್ಲಿ ಅವರು ನಮಗೆಲ್ಲಾ ಮೇಷ್ಟ್ರು. ಅವರಿಗೊಂದು ಸರ್‌ಪ್ರೈಸ್ ಕೊಡುವ ಸಲುವಾಗಿ ನಾವೆಲ್ಲಾ ಮಾತನಾಡಿಕೊಂಡು ಶಾಟ್‌ನಲ್ಲಿ ಇಲ್ಲದ 'ಗುಡ್‌ಮಾರ್ನಿಂಗ್ ಸರ್' ಎಂದು ರಾಗವಾಗಿ ಹೇಳಿದಾಗ, ಬೆರಗುಗಣ್ಣಿನಿಂದ ನಮ್ಮನ್ನೆಲ್ಲ ನೋಡಿ ನಕ್ಕುಬಿಟ್ಟಿದ್ದರು. ಹಾಗಾಗಿ ಮತ್ತೊಂದು ಟೇಕ್ ಮಾಡಬೇಕಾಯಿತು. ಆದರೆ ಅದರ ಬಗ್ಗೆ ಅವರಿಗೆ ಬೇಜಾರೇನೂ ಆಗಲಿಲ್ಲ ಅನ್ನುವುದೇ ನಮಗೆಲ್ಲಾ ಖುಷಿಯಾಗಿತ್ತು. ಅಂದು ರಾತ್ರಿ ಚಿತ್ರೀಕರಣ ತಡವಾಯಿತು, ನಮ್ಮೆಲ್ಲರ ಜೊತೆಗಿದ್ದು ನಮಗೆಲ್ಲಾ 'ಬಾಯ್' ಹೇಳಿದ್ದೇ ಕೊನೆ ನನ್ನ ಪಾಲಿಗೆ. ■